# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 28-4-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಸೋಯಾಬೀನ್ ಎಣ್ಣೆ ದರ ಹೆಚ್ಚಳ

ಇಂಡೋನೇಶಿಯಾ ಪಾಮೆಣ್ಣೆ ರಫ್ತು ನಿರ್ಬಂಧ ಹೇರಲಿರುವುದರಿಂದ ಸೋಯಾಬೀನ್ ಎಣ್ಣೆ ದರ ಹೆಚ್ಚಳವಾಗಿದೆ. ಪಾಮೆಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಯ ಜಾಗತಿಕ ಪೂರೈಕೆ ಇಳಿಕೆಯಿಂದಾಗಿ ಸೋಯಾಬೀನ್ ಎಣ್ಣೆ ದರ ದಾಖಲೆ ಹೆಚ್ಚಳವಾಗಿದೆಯೆನ್ನಲಾಗಿದೆ. ದರ ಹೆಚ್ಚಳದ ನಂತರ **CBOT** ಸೋಯಾ ಫ್ಯೂಚರ್ ದರ ಅಲ್ಪ ಮಟ್ಟದ ಇಳಿಕೆ ಕಂಡು ಮತ್ತೆ ಹೆಚ್ಚಳವಾಗಿದೆ.

## ಬೇಸಿಗೆ ಬೇಳೆಕಾಳು ಬಿತ್ತನೆ ವಿಸ್ತೀರ್ಣ 53 ಶೇಕಡಾ ಹೆಚ್ಚಳ

ಹಿಂದಿನ ವರ್ಷಕ್ಕೆ ಹೋಲಿಸಿದಾಗ ಈ ವರ್ಷ ಭಾರತದ ಬೇಳೆಕಾಳು ಬಿತ್ತನೆ ಜಾಗದ ವಿಸ್ತೀರ್ಣ 53 ಶೇಕಡಾ ಹೆಚ್ಚಳವಾಗಿ 14.18 ಲಕ್ಷ ಹೆಕ್ಟೇರ್ ಆಗಿದೆಯೆನ್ನಲಾಗಿದೆ. ಇದರಲ್ಲಿ ಹೆಸರುಕಾಳು ಬಿತ್ತನೆ ಗಣನೀಯ ಹೆಚ್ಚಳವಾಗಿದೆಯೆನ್ನಲಾಗಿದೆ. ಒಟ್ಟು ಬೇಸಿಗೆ ಬೆಳೆಗಳ ಬಿತ್ತನೆ ಹಿಂದಿನ ವರ್ಷದ 60 ಲಕ್ಷ ಹೆಕ್ಟೇರ್‌ನಿಂದ 64 ಲಕ್ಷ ಹೆಕ್ಟೇರ್ ಗಳಿಗೆ ಹೆಚ್ಚಳವಾಗಿದೆಯೆನ್ನಲಾಗಿದೆ.

## ಜೋಳ ದರ ಇಳಿಕೆ

ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಜೋಳ ಹೊಸ ಬೆಳೆಯ ಆವಕ ಹೆಚ್ಚಳದಿಂದ ದರ ಇಳಿಕೆಯಾಗಿದೆ. ಕರ್ನಾಟಕದ ಮಾರುಕಟ್ಟೆಗಳಲ್ಲಿ ಜೋಳ ದರ ಸ್ಥಿರವಿದ್ದು, ಮುಂದಿನ ದಿನಗಳಲ್ಲಿ ಬಿಹಾರದಲ್ಲಿ ಆವಕ ಮತ್ತಷ್ಟು ಹೆಚ್ಚಳವಾಗಲಿದೆಯೆನ್ನಲಾಗಿದೆ.

## ಜಾಗತಿಕ ಕಾಫಿ ರಫ್ತು ಅಕ್ಟೋಬರ್ 2021 ರಿಂದ ಫೆಬ್ರವರಿ 2022 ರ ಅವಧಿಯಲ್ಲಿ 0.8 ಶೇಕಡಾ ಇಳಿಕೆ

ಜಾಗತಿಕ ಕಾಫಿ ರಫ್ತು 2021 ಅಕ್ಟೋಬರ್ ಹಾಗೂ 2022 ಅವಧಿಯಲ್ಲಿ 0.8 ಶೇಕಡಾ ಇಳಿಕೆಯಾಗಿ 53.2 ಮಿಲಿಯನ್ ಚೀಲಗಳಾಗಿವೆಯೆಂದು **ICO** ಹೇಳಿದೆ. ಕೊಲಂಬಿಯಾದ (ಜಾಗತಿಕ 2ನೇ ಅತಿ ಹೆಚ್ಚು ಅರೆಬಿಕಾ ಕಾಫಿ ಉತ್ಪಾದಕ ದೇಶ) ಮಾರ್ಚ್ 2022 ರ ಕಾಫಿ ಉತ್ಪಾದನೆ 13 ಶೇಕಡಾ ಇಳಿಕೆಯಾಗಿ 914000 ಚೀಲಗಳಾಗಿವೆಯೆನ್ನಲಾಗಿದೆ. **ICO** 2020–21 ರ ಜಾಗತಿಕ ಕಾಫಿ ಕೊರತೆಯನ್ನು 3.13 ಮಿಲಿಯನ್ ಚೀಲಗಳಿಗೆ ಇಳಿಸಿದೆ. (+1.2 ಮಿಲಿಯನ್ ಚೀಲ ಮಿಗತೆಯಿಂದ) ಇದರೊಂದಿಗೆ 2020–21 ರ ಜಾಗತಿಕ ಕಾಫಿ ಉತ್ಪಾದನೆಯನ್ನು ಸ್ವಲ್ಪ ಮಟ್ಟಿಗೆ ಇಳಿಕೆಯಾಗಿದ್ದು, ಬಳಿಕ ಹೆಚ್ಚಳದ ಅಂದಾಜು ಮಾಡಲಾಗಿದೆ. ರಾಬೆಸ್ಟಾ ಕಾಫಿ ಪೂರೈಕೆ ಹೆಚ್ಚಳದಿಂದ ಸ್ವಲ್ಪಮಟ್ಟದ ದರ ಇಳಿಕೆಯಾಗಿದೆ. ದರ ಬಿಗುಪೂರೈಕೆಯಿಂದ ದರ ಹೆಚ್ಚಳದಲ್ಲಿ ಮುಂದುವರೆಯುವ ಸಾಧ್ಯತೆಯಿದೆ.